ಯತ್ನಿಸುತ್ತಿದ್ದ. ಎಡಗಾಲು ಕುಂಟುತ್ತಿದ್ದ. ದೇಹದಲ್ಲಿ ಬಲವಿರಲಿಲ್ಲ. ಒಂದು ಬದಿಗೆ ವಾಲಿಕೊಂಡು ನಡೆಯುತ್ತಿದ್ದ. ಬಾಯಿ ಸೊಟ್ಟವಿತ್ತು. ಸದಾ ಎಂಜಲು ಸುರಿಯುತ್ತಿತ್ತು. ಹೀಗಿದ್ದ ಅಪ್ಪನಿಗೆ ಪಾರ್ಶ್ವವಾಯು ಬಡಿದ ಮೇಲೆ ಅರ್ಧ ದೇಹ ನಿತ್ರಾಣವಾಗಿತ್ತು. ಮಲಗಿದ್ದಲ್ಲಿಯೇ ಎಲ್ಲವೂ ಆಗಬೇಕಿತ್ತು. ಅಪ್ಪ ಹಾಸಿಗೆ ಹಿಡಿದ ಮೇಲೆ ಅತ್ತೆ ಎರಡ್ಮೂರು ತಿಂಗಳು ಇದ್ದು ಎಲ್ಲಾ ಹೇಳಿಕೊಟ್ಟು ಹೋಗಿದ್ದಳು.

ಅಂದಿನಿಂದ ಮನೆಯಲ್ಲಿ ನಾನು ಅಪ್ಪ ಇಬ್ಬರೇ. ಓದು ನಿಲ್ಲಿಸಿದೆ. ನಿಲ್ಲಿಸದೆ ಬೇರೆ ದಾರಿಯಿರಲಿಲ್ಲ. ಕಿರಾಣಿ ಅಂಗಡಿಯಲ್ಲಿ ಸಾಮಾನು ಕಟ್ಟಿಕೊಡುವ ಕೆಲಸಕ್ಕೆ ಸೇರಿಕೊಂಡೆ. ತಿಂಗಳಿಗೆ ಆರು ಸಾವಿರ ಕೂಲಿ. ಅಜ್ಜಿ ಇದ್ದಾಗಿನಿಂದಲೂ ಮಾವ ಊರಿಂದ ಕಾಳು ಕಡಿ ತಂದುಕೊಡುತ್ತಿದ್ದ. ಅಜ್ಜಿಯ ಖರ್ಚಿಗೆ ನಾಲ್ಕಾಸು ದುಡ್ಡೂ ಕೊಟ್ಟು ಹೋಗುತ್ತಿದ್ದ. ಅಪ್ಪ ಹಬ್ಬಗಳಲ್ಲಿ ನಾಲ್ಕಾರು ಮನೆಯಲ್ಲಿ ಜಾಗಟೆ ಬಡಿಯುತ್ತಿದ್ದ. ಅದು ಕುಲ ಕಸುಬಂತೆ. ಜಾಗಟೆ ಹೊಡಿಸಿಕೊಂಡ ಮನೆಯವರು ಮನೆಗೆ ಕಾಳು ಕಡಿ ಕೊಡುವುದು ಕ್ರಮ. ಆಗಾಗ ಮನೆಗೆ ಆ ಕಾಳು ಕಡಿಗಳೂ ಬರ್ತಾ ಇದ್ವು. ಅಪ್ಪಾ ಓಡಾಡುವಂತಿರುವವರೆಗೆ ಜಾಗಟೆ ಬಡಿದ. ಅವನು ಹಾಸಿಗೆ ಹಿಡಿದ ಮೇಲೆ ಅದು ಅಲ್ಲಿಗೆ ಕೊನೆಯಾಯ್ತು. ನಾನು ಎಂದೂ ಜಾಗಟೆ ಹಿಡಿಯಲಿಲ್ಲ.

ಬೆಳಗಿನ ಅಪ್ಪನ ಚಾಕರಿ ಮುಗಿಸಿ, ತಟ್ಟೆಗೆ ಹಿಡಿ ಅನ್ನ ಹಾಕಿಕೊಂಡೆ. ಯಾಕೊ ತಿನ್ನಲು ಮನಸಾಗಲಿಲ್ಲ. ಆಚೆ ಚೆಲ್ಲಿ ತಟ್ಟೆ ತೊಳೆದಿಟ್ಟೆ. ಕಡು ನೀಲಿ ಬಣ್ಣದ ಅಂಗಿ ತೊಟ್ಟುಕೊಂಡು ಅಪ್ಪನ ಬಳಿ ಹೋದೆ. ಕಣ್ಣು ಪಿಳಿ ಪಿಳಿ ಬಿಟ್ಟು ನೋಡುತ್ತಿದ್ದರು. ನಾನಿಂದು ಅಂಗಡಿಗಲ್ಲದೆ ಎಲ್ಲೊ ಹೊರಟಿರುವ ಸೂಕ್ಷ್ಮ ಅವನಿಗೆ ಗೊತ್ತಾಗಿತ್ತೇನೊ; ನನ್ನನ್ನು ದೀನನಾಗಿ ನೋಡುತ್ತಿದ್ದ. ಅವನ ಎರಡು ಹನಿ ನೀರು ಕಣ್ಣುಗಳಲ್ಲಿ ಹುಟ್ಟಿ ದಿಂಬಿಗೆ ಬಂದು ಬಿದ್ದು ಸತ್ತು ಹೋದವು. ಅಪ್ಪನ ತಲೆ ಸವರಿ, ಮಧ್ಯಾಹ್ನ ಸಂತು ಬಂದು ಹೋಗ್ತಾನೆ. ನಾನು ಬರೋದು ರಾತ್ರಿ ಆಗ್ಬಹುದು ಅಂತ ಜೋರಾಗಿ ಹೇಳಿ ಬಾಗಿಲಿಕ್ಕಿಕೊಂಡು ಹೊರಗೆ ಬಿದ್ದೆ.

ಊರು ಆಗ ರಾತ್ರಿ ಸುಖದಿಂದ ಮೈ ಕೊಡವಿ ಏಳುತ್ತಿತ್ತು. ನಿದ್ದೆಯಲ್ಲಿ ಸೆರಗು ಸರಿದ ಹೆಣ್ಣಿನ ಬೆನ್ನಿನಂತೆ ಕಾಣುತ್ತಿತ್ತು ರಸ್ತೆ. ಜೋರು ಹೆಜ್ಜೆ ಹಾಕಿ ದುರ್ಗಿಗುಡಿ ದಾಟಿ, ಹೊಸಕೇರಿ ತಲುಪಿದೆ. ನೀಲಕಂಠ ದೇವಸ್ಥಾನದ ತಿರುವಿನಲ್ಲಿ ಲಲಿತಿಯ ನೆನಪಾಯ್ತು. ಅವಳ ನೆನಪಾದದ್ದೆ ಕೈಕಾಲುಗಳೆಲ್ಲಾ ಬಿಸಿಯಾದವು. ಲಲಿತಿಗೆ ನಿಜಕ್ಕೂ ಬೇಕಾಗಿದ್ದು ಏನು? ಅವಳನ್ನು ಅಂದು ಮನೆಗೆ ಕರೆದುಕೊಂಡು ಹೋಗದೆ ಇದ್ದಿದ್ದರೆ ಇಂದಿಗೂ ನಾನು ಅವಳನ್ನು ನನ್ನ ಬಳಿ ಉಳಿಸಿಕೊಳ್ಳುತ್ತಿದ್ದೆನಾ?

ಉಳಿಸಿಕೊಂಡು ಏನು ಮಾಡುತ್ತಿದ್ದೆ? ಕದ್ದು ಮಾತಾಡಿ, ಕದ್ದುಮುಚ್ಚಿ ಸೇರುತ್ತಿದ್ದೆವು ಅಷ್ಟೆ. ಅದರಾಚೆ ಮತ್ತೇನೂ ಸಾಧ್ಯವಿರಲಿಲ್ಲ. ಆದರೆ ಅವಳ ಕಷ್ಟವೇನಿತ್ತೊ. ಅಂಗಡಿಗೆ ದಿನಸಿ ಕೊಳ್ಳಲು ಬರುವ ಅವಳ ಪರಿಚಯ ಇಲ್ಲಿಯವರೆಗೂ ತಿರುಗಿತ್ತು. ಬಸ್‌ಸ್ಟ್ಯಾಂಡ್ ತಲುಪಿದೆ. ಬಸ್ಸು ಇನ್ನೂ ಬಂದಿರಲಿಲ್ಲ. ನಾಲ್ಕಾರು ಜನರಿದ್ದರು. ಅವ್ವನನ್ನು ಭೇಟಿಯಾಗುವ ಕ್ಷಣಗಳನ್ನು ನೆನಪಿಸಿಕೊಂಡೆ. ರೋಮಗಳು ಎದ್ದು ನಿಂತವು.


***

ಬಸ್ಸು ಹತ್ತಿ ಕಿಟಕಿ ಪಕ್ಕ ಕೂತು ಗಾಜು ತೆರೆದೆ. ಮುಖಕ್ಕೆ ಬಾರಿಸುವಂತೆ ಗಾಳಿ ನುಗ್ಗಿತು. ನಿಮ್ಮವ್ವ ಓಡಿಹೋದವಳಲ್ವಾ? ಅನ್ನುವ ಪ್ರಶ್ನೆ ಇಟ್ಟುಕೊಂಡು ಜನ ಈಗಾಗಲೇ ಸಾವಿರಾರು ಬಾರಿ ಮುಖಕ್ಕೆ ಬಾರಿಸಿದ್ದಾರೆ. ಗಾಳಿ ಈಗ ಬಾರಿಸುತ್ತಿದೆಯೊ, ಸಮಾಧಾನಿಸುತ್ತಿದೆಯೊ ಗೊತ್ತಾಗಲಿಲ್ಲ. ನಿಮ್ಮವ್ವ ಓಡಿ ಹೋದವಳಲ್ವಾ ಅನ್ನೊ ಪ್ರಶ್ನೆ ಯಾರಾದರೂ ನನಗೆ ನೀವು ಆರಾಮದೀರಾ..? ಎಂದು ಕೇಳುವಷ್ಟು ಮಾಮೂಲಿಯಂತಾಗಿದೆ. ಅವ್ವ ಓಡಿ ಹೋಗಿದ್ದು ಒಮ್ಮೆ ಆದರೆ ಈ ಜನ ಅವ್ವನನ್ನು ಮತ್ತೆ ಮತ್ತೆ ಓಡಿಸುತ್ತಿದ್ದರು. ಓಡಿ ಹೋದ ಅವ್ವ ಜನರ ಬಾಯಲ್ಲಿ ಏನೆಲ್ಲಾ ಆಗಿ ಹೋಗಿದ್ದಳು. ಒಬ್ಬನಂತೂ ದಾವಣಗೆರೆಯ ಸ್ಲಮ್ಮಿನಲ್ಲಿ ನಿಮ್ಮವ್ವ ಸೆರಗು ಸರಿಸಿಕೊಂಡು ನಿಂತಿದ್ದನ್ನು ನೋಡಿದೆ; ಎಂದು ಹೇಳಿದ್ದ. ಮೊದ ಮೊದಲೆಲ್ಲಾ ಅವರೊಂದಿಗೆ ಜಗಳ ಆಡುತ್ತಿದ್ದೆ. ಹೊಡೆದಾಡಿದ್ದೆ.

ಮನೆಗೆ ಬಂದು ಒಬ್ಬನೇ ಕೂತು ಅತ್ತಿದ್ದೆ. ಈಗ ಅವರ ಮಾತುಗಳು ನನ್ನೊಳಗೆ ಏನನ್ನೂ ಹುಟ್ಟಿಸುತ್ತಿಲ್ಲ. ಈ ಜಗತ್ತಿನಷ್ಟು ನಮ್ಮವ್ವ ನೀಚಳಾಗಿಲ್ಲ ಅನ್ನುವುದಂತೂ ಗೊತ್ತಾಗುತ್ತಿದೆ. ಅವ್ವ ಮನೆ ಬಿಟ್ಟು ಹೊರಟು ಹೋದಾಗ ನನಗೆ ಆರು ವರ್ಷವೆಂದು ಅಜ್ಜಿ ಹೇಳುತ್ತಿದ್ದಳು. ಇವ್ನು ಶಾಲೆಗೆ ಸೇರುವ ವಯಸ್ಸಾಗಲಿ ಎಂದು ಅಲ್ಲಿಯವರೆಗೂ ಕಾದಳೊ, ನಾನು ಶಾಲೆಗೆ ಸೇರಲು ಅವ್ವ ಹೋಗುವವರೆಗೂ ಕಾದೆನೊ.. ಗೊತ್ತಿಲ್ಲ. ನಿಮ್ಮವ್ವ ಹೋದ ವರ್ಷವೇ ನೀನು ಶಾಲಿ ಸೇರಿದ್ದು; ಎಂದು ಅಜ್ಜಿ ಹೇಳುತ್ತಿದ್ದಳು. ಬಣ್ಣಗೆಟ್ಟ ಗೋಡೆಗೆ ನೇತುಹಾಕಿದ್ದ ಪಟದಲ್ಲಿ ಅವ್ವ ಇದ್ದಳು. ಒಮ್ಮೊಮ್ಮೆ ನನಗೆ ಪಟದಲ್ಲಿರುವ ಅವ್ವನ ನಗುವೇ ಈ ಮನೆ ತುಂಬಾ ತುಂಬಿದೆಯೇನೊ ಅನಿಸುತ್ತಿತ್ತು.

ನನಗಿನ್ನೂ ನೆನಪಿದೆ. ಫಸ್ಟು ಪಿಯುಸಿಗೆ ಹೋಗುತ್ತಿದ್ದೆ. ಯಾರೊ ಒಬ್ಬ ನಿಮ್ಮವ್ವ ಯಾವನ್ಜೊತೆ ಹೋಗಿದ್ದು..; ಅಂದ. ತೀರಾ ಕೋಪ ಬಂದು ಅವನ ಬಾಯಲ್ಲಿ ರಕ್ತ ಬರುವಂತೆ ಹೊಡೆದಿದ್ದೆ. ಕಾಲೇಜಿನಲ್ಲಿ ದೊಡ್ಡ ಗಲಾಟೆ ಆಗಿತ್ತು. ಅವತ್ತು ಮನೆಗೆ ಬಂದವನೇ ಗೋಡೆಯ ಮೇಲಿದ್ದ ಅವ್ವನ ಪಟವನ್ನು ತೆಗೆದು ಎಸೆಯಲು ಹೋಗಿದ್ದೆ. ಅಜ್ಜಿ ಕಿತ್ತುಕೊಂಡು ತನ್ನ ಟ್ರಂಕಿನಲ್ಲಿ ಅಡಗಿಸಿಟ್ಟಿದ್ದರು. ಆಮೇಲೆ ಎಷ್ಟೋ ದಿನಗಳವರೆಗೂ ಕಾಲೇಜು ಕಡೆಯೇ ಹೋಗಿರಲಿಲ್ಲ. ಅವ್ವನ ಮೇಲೆ ನನಗೆ ಅತೀ ಸಿಟ್ಟಿತ್ತು.

ಮಾವನ ಮನೆ ನಮ್ಮ ಊರಿನ ಪಕ್ಕದಲ್ಲೇ ಇತ್ತು.



ಅಪ್ಪನ ಕಡೆಯಿಂದ ಅವರು ನನಗೆ ಮಾವ, ಅವ್ವನ ಕಡೆಯಿಂದ ತಾತ. ಯಾಕೊ ಅವರಿಗೆ ಮಾವ ಎಂದು ಕರೆಯುವುದೇ ರೂಢಿಯಾಗಿತ್ತು. ನಾನು ಬಹುತೇಕ ಅವರ ಮನೆಯಲ್ಲೇ ಇರುತ್ತಿದ್ದೆ. ಅತ್ತೆ ನನ್ನ ನೋಡಿಕೊಳ್ತಾ ಇದ್ರು. ಅವ್ವ ನೆನಪಾಗದಂತೆ ನೋಡಿಕೊಳ್ಳಲು ತುಂಬಾ ಯತ್ನಿಸುತ್ತಿದ್ದರು. ನನಗದು ಗೊತ್ತಾಗುತ್ತಿತ್ತು. ಪಿಯುಸಿ ಫೇಲಾದ ಮೇಲೆ ಅಂಗಡಿ ಸೇರಿದೆ. ಅಜ್ಜಿ ತೀರಿಕೊಂಡಿದ್ದರು. ನಂತರ ಮಾವನ ಮನೆಗೆ ಹೋಗೋದು ಪೂರ್ತಿ ನಿಲ್ಲಿಸಿ ಬಿಟ್ಟೆ.

ಬಸ್ಸು ಈಗ ಮಲೇಬೆನ್ನೂರು ದಾಟಿ ಮುಂದೆ ಹೊರಟಿತು. ಬಹುಶಃ ಮಾವ ಈಗಾಗಲೇ ಹರಿಹರ ಬಸ್ ಸ್ಟ್ಯಾಂಡ್‌ಗೆ ಬಂದು ಕಾಯುತ್ತಿರಬಹುದು. ಈ ಮಲೇಬೆನ್ನೂರು ಗುಡಿಗೆ ಒಮ್ಮೆ ಲಲಿತಿ ನನ್ನನ್ನು ಕರೆದುಕೊಂಡು ಬಂದಿದ್ದಳು. ಭಯದಲ್ಲಿ ಮುದುಡಿ ಹೋಗಿದ್ದಳು. ಇವಳು ಯಾಕಿಷ್ಟು ಹೆದರಿಕೊಂಡಿದ್ದಾಳೊ ಅನಿಸುತ್ತಿತ್ತು. ಗುಂಡು ಗುಂಡಾಗಿರುವ ಲಲಿತಿಗೆ ಮದುವೆಯಾಗಿತ್ತು. ಗಂಡನೂ ಇದ್ದ. ಅವನದೂ ಆ ಟೌನಿನಲ್ಲೇ ಒಂದು ಚಹಾದ ಅಂಗಡಿಯಿತ್ತು.

ಅವತ್ತೊಂದು ಸಂಜೆ, ಇನ್ನೇನು ಕತ್ತಲಾಗುತ್ತದೆ ಅನ್ನೊ ಹೊತ್ತಿನಲ್ಲಿ ನಾನು ಮನೆಗೆ ಹೊರಟಿದ್ದೆ. ಅದಕ್ಕಾಗಿಯೇ ಕಾದಿದ್ದವಳಂತೆ ಲಲಿತಿ ನನ್ನ ಜೊತೆ ಮನೆಗೆ ಬಂದಿದ್ದಳು. ಮನೆಗೆ ಬರಲು ಎಂದೂ ಹಟ ಮಾಡದ ಅವಳು ಅಂದು ಹಟ ಹಿಡಿದೆ ಬಂದಿದ್ದಳು. ಅಪ್ಪ ನಡುಮನೆಯಲ್ಲಿ ಮಲಗಿದ್ದರು. ಮನೆಯಲ್ಲಿ ಮೂರೇ ಕೋಣೆ. ಅವಳಿಗೆ ಅಪ್ಪನನ್ನು ತೋರಿಸಿದೆ. ಪಾಪ ಅಂದಳು. ಚಹಾ ಮಾಡಿಕೊಡುವೆ ಅಂದೆ 'ಬೇಡ ಅಂದಳು. ನಮ್ಮಿಬ್ಬರ ನಡುವೆ ಅದೇನೊ ನಡೆಯತೊಡಗಿತ್ತು. ನಾನು ರೂಮಿಗೆ ಹೋದೆ. ಅವಳೂ ಬಂದಳು. ತಬ್ಬಿಕೊಂಡಳು. ನಾನು ಇದನ್ನು ಊಹಿಸಿದ್ದೆ. ನಾನೂ ತಬ್ಬಿಕೊಂಡೆ. 'ಗ್ರುಗ್ರುಗ್ರೊ.. ಅಪ್ಪ ಕೂಗಿದ ಸದ್ದು. ಸದ್ದಿನ ಹಿಂದೆಯೇ ಮನೆಯಲ್ಲಿ ಅಪ್ಪನ ಕಕ್ಕಸಿನ ವಾಸನೆ ಹಬ್ಬಿತು. ಲಲಿತಿ ಮುಖ ಸಿಂಡರಿಸಿಕೊಂಡಳು. ಅವಳಿಂದ ಬಿಡಿಸಿಕೊಳ್ಳಲು ನೋಡಿದೆ. ನನ್ನೊಳಗಿನ ಆಸೆ ಸತ್ತು ಹೋಗಿತ್ತು. ಅವಳು ಇನ್ನಷ್ಟು ಬಿಗಿಯಾಗಿ ತಬ್ಬಿಕೊಂಡಳು. ಸೆರಗು ಕಳಚಿದಳು. ಅಪ್ಪ ಕೂಗುತ್ತಲೇ ಇದ್ದರು. ಇದೆಲ್ಲಾ ಬೇಡ, ಇವತ್ತಲ್ಲ ಮತ್ತೆಂದೂ ಬೇಡ ಎಂದು ಹಿಂದೆ ಸರಿದು ಸೆರಗನ್ನು ಮರಳಿ ಅವಳಿಗೆ ಹೊದಿಸಿದೆ. ಅವಳಿಗೆ ಅವಮಾನವಾಯ್ತು ಅನಿಸುತ್ತೆ. ದುಃಖವೂ ಆಗಿರಬಹುದು.

ಅವಳನ್ನು ಕಳುಹಿಸಿ ಬಂದು ಅಪ್ಪನ ಕಕ್ಕಸು ತೊಳೆದು ಮಲಗಿಸಿದೆ. ಅಪ್ಪನ ಮೇಲೆ ನನಗೆ ಸಿಟ್ಟು ಬರಬೇಕಿತ್ತು. ಆದರೆ ಬರಲಿಲ್ಲ. ನನ್ನ ಕೆಲವು ಗೆಳೆಯರು ಕಣ್ಣಮುಂದೆ ಬಂದರು. ಅವರ ಬದುಕೂ ಕಣ್ಣಮುಂದೆ ಬಂತು. ರೂಮಿನಲ್ಲಿ ಹೋಗಿ ಸುಮ್ಮನೆ ಕೂತೆ. ಎಷ್ಟೋ ಹೊತ್ತಿನವರೆಗೂ ಕೂತೇ ಇದ್ದೆ. ನಂತರ ಎದ್ದು ದಡದಡ ಹೋಗಿ ಅಜ್ಜಿಯ ಟ್ರಂಕಿನಿಂದ ಆ ಪಟವನ್ನು ತೆಗೆದು ಒರೆಸಿ ಮತ್ತೆ ಅದನ್ನು ಗೋಡೆಗೆ ನೇತು ಹಾಕಿದೆ. ಚೆಲುವಾದ ಹೆಂಗಸು. ಅಜ್ಜಿಯ ಮಾತು ನೆನಪಾಗಿತ್ತು. ಬಸ್ಸಿನ ಕಿಟಕಿಗೆ ಯಾರೊ ಪಟಪಟ ಹೊಡೆಯುವ ಸದ್ದಿಗೆ